ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 12 ]
Total No. of Printed Pages : 12 ]
ಒಟ್ಟು ಪ್ರಶ್ನೆಗಳ ಸಂಖ್ಯೆ : 38 ]
Total No. of Questions : 38 ]

**A**

**CCE RR**

Question Paper Serial No. **600**

ಇಲ್ಲಿಂದ ಕತ್ತರಿಸಿ

**ಸಂಕೇತ ಸಂಖ್ಯೆ : 62-K**

**Code No. : 62-K**

# ವಿಷಯ : ತೃತೀಯ ಭಾಷೆ — ಕನ್ನಡ

# Subject : Third Language — KANNADA

**(ಪುನರಾವರ್ತಿತ ಶಾಲಾ ಅಭ್ಯರ್ಥಿ / Regular Repeater)**

ದಿನಾಂಕ : 01. 07. 2022 ] [ Date : 01. 07. 2022

ಸಮಯ : ಬೆಳಗ್ಗೆ 10-30 ರಿಂದ ಮಧ್ಯಾಹ್ನ 1-30 ರವರೆಗೆ ] [ Time : 10-30 A.M. to 1-30 P.M.

ಗರಿಷ್ಠ ಅಂಕಗಳು : 80 ] [ Max. Marks : 80

**TEAR HERE TO OPEN THE QUESTION PAPER**
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಒಟ್ಟು 38 ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

Tear here

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ : 8 × 1 = 8**

1. ಕೆಳಗಿನವುಗಳಲ್ಲಿ ಯೋಗವಾಹಗಳನ್ನು ಗುರುತಿಸಿ

(ಎ) ಐ, ಔ

(ಬಿ) ಙ, ಞ

(ಸಿ) ಅಂ, ಅಃ

(ಡಿ) ಇ, ಈ

2. ಕನ್ನಡದಲ್ಲಿ ಅನೇಕ 'ಇಂಗ್ಲಿಷ್' ಪದಗಳು ಬಳಕೆಯಲ್ಲಿವೆ. ಇಂಗ್ಲಿಷ್ ಪದಕ್ಕೆ ಬಳಸಿರುವ ಲೇಖನ ಚಿಹ್ನೆ

(ಎ) ಉದ್ಧರಣ ಚಿಹ್ನೆ

(ಬಿ) ವಾಕ್ಯವೇಷ್ಟನ ಚಿಹ್ನೆ

(ಸಿ) ಆವರಣ ಚಿಹ್ನೆ

(ಡಿ) ಅರ್ಧವಿರಾಮ ಚಿಹ್ನೆ

3. ‘ಋಣ’ ಪದದ ತದ್ಭವ ರೂಪ

(ಎ) ಗುಣ

(ಬಿ) ಋಣಾ

(ಸಿ) ರಿಣ

(ಡಿ) ವರ್ಣ

4. ಇದು ಆತ್ಮಾರ್ಥಕ ಸರ್ವನಾಮ

(ಎ) ತಮ್ಮ

(ಬಿ) ನಿಮ್ಮ

(ಸಿ) ನೀವು

(ಡಿ) ನಾನು

5. ದ್ವಿರುಕ್ತಿ ಪದವನ್ನು ಗುರುತಿಸಿ

(ಎ) ಸರಸರ

(ಬಿ) ಮನೆಮಠ

(ಸಿ) ಫಳಫಳ

(ಡಿ) ಬೇಗಬೇಗ

6. ಇದು ಲೋಪ ಸಂಧಿಗೆ ಉದಾಹರಣೆ

(ಎ) ಮಹಾಲಯ

(ಬಿ) ಮಳೆಗಾಲ

(ಸಿ) ವೈರಾಗ್ಯವಿದು

(ಡಿ) ಮಾತನ್ನು

7. ಕೆಳಗಿನವುಗಳಲ್ಲಿ ಅನ್ಯದೇಶೀಯವಲ್ಲದ ಪದ

(ಎ) ನೇಸರು

(ಬಿ) ಕಾಗದ

(ಸಿ) ಕವರು

(ಡಿ) ಹೋಟೆಲ್

8. 'ಇಂಚರ' ಪದ ಈ ಸಮಾಸಕ್ಕೆ ಉದಾಹರಣೆ

(ಎ) ತತ್ಪುರುಷ ಸಮಾಸ

(ಬಿ) ಕರ್ಮಧಾರಯ ಸಮಾಸ

(ಸಿ) ಕ್ರಿಯಾ ಸಮಾಸ

(ಡಿ) ದ್ವಿಗು ಸಮಾಸ

**II. ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ: 4 × 1 = 4**

9. ಶಿಶುನಾಳದ ಸಂತ : ಶರೀಫರು :: ಹುಲಗೂರಿನ ಸಂತ : ......................... .

10. ಸೋಮಣ್ಣ : ಸ್ವಾತಂತ್ರ್ಯ ಹೋರಾಟಗಾರ :: ಕುಲಕರ್ಣಿ : ......................... .

11. ಆಚಾರವೇ : ಸ್ವರ್ಗ :: ಅನಾಚಾರವೇ : ......................... .

12. ಬಸವಣ್ಣನವರ ವಚನಗಳ ಅಂಕಿತ : ಕೂಡಲ ಸಂಗಮದೇವ :: ಪುರಂದರದಾಸರ ಕೀರ್ತನೆಗಳ ಅಂಕಿತ : ......................... .

**III. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ : 4 × 1 = 4**

13. ಅಮೆರಿಕಾದ ಪೊಲೀಸರು ಭಾರತದ ಪೊಲೀಸರ ಬಗೆಗೆ ಗೊರೂರರಲ್ಲಿ ಯಾವ ವಿಚಾರವನ್ನು ಕೇಳಿ ತಿಳಿದುಕೊಂಡರು ?

14. ಬಸವಣ್ಣನವರು ಹೇಳಿರುವಂತೆ ದೇವರನ್ನು ಒಲಿಸುವ ಪರಿ ಯಾವುದು ?

15. ಪುಲಿಗೆರೆ ಸೋಮನಾಥ ಹೇಳಿರುವಂತೆ ಋಷಿಯಲ್ಲಿ ಯಾವ ಗುಣವಿರಬೇಕು ?

16. ಮಗನಾದವನು ಹೇಗಿರಬೇಕೆಂದು ಸೋಮೇಶ್ವರ ಶತಕದಲ್ಲಿ ತಿಳಿಸಿದ್ದಾರೆ ?

**IV. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 8 × 2 = 16**

17. ಮಿನಿ ಪೊಲೀಸ್ ನಗರದಲ್ಲಿ ಗೊರೂರರು ದಾರಿ ತಪ್ಪಿಸಿಕೊಂಡ ಬಗೆಯನ್ನು ವಿವರಿಸಿ.

18. ಗಾಂಧೀಜಿಯವರು ಗೌರಮ್ಮನವರ ಮನೆಗೆ ಬರಲು ಕಾರಣವೇನು ?

19. ಶರೀಫರು ತಮಗಾದ ದುಃಖವನ್ನು ಕಡಿಮೆ ಮಾಡಿಕೊಂಡ ಬಗೆಯನ್ನು ತಿಳಿಸಿ.

20. ಕೆಳದಿ ಚೆನ್ನಮ್ಮಳು ತನ್ನ ರಾಜಧಾನಿಯನ್ನು ಭುವನಗಿರಿಗೆ ಏಕೆ ಸ್ಥಳಾಂತರಿಸಿದಳು ?

21. ಶೋಷಣೆಯನ್ನು ವಿರೋಧಿಸುವವರು ಪಡಬೇಕಾದ ಕಷ್ಟವು 'ಕಟ್ಟತೇವ ನಾವು' ಕವಿತೆಯಲ್ಲಿ ಅಭಿವ್ಯಕ್ತಿಗೊಂಡಿರುವುದನ್ನು ಸಮರ್ಥಿಸಿ.

22. ಬಣ್ಣ ಬೇರೆಯಾದರೂ ಜೀವರಸ ಒಂದೇ ಎಂಬ ಭಾವನೆ 'ಭೂಮಿತಾಯ ಕುಡಿಗಳು' ಕವನದಲ್ಲಿ ಹೇಗೆ ವ್ಯಕವಾಗಿದೆ ?

23. ರೈತನು ದನಕರುಗಳು ಹೇಗಾಗಿವೆ ಎಂದು ಮಳೆರಾಯನಲ್ಲಿ ನಿವೇದಿಸುತ್ತಾನೆ ?

24. ಧರ್ಮಪದನಿಗೆ ವಿಷ ಉಣಿಸಲು ಶಿಲ್ಪಿ ಪ್ರಯತ್ನಿಸಿದ್ದೇಕೆ ?

**V. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭದೊಡನೆ ಸ್ವಾರಸ್ಯವನ್ನು ಬರೆಯಿರಿ : 2 × 3 = 6**

25. "ದೊರಕಿದಾ ಗುರು ದೊರಕಿದಾ ಸದ್ಗುರು."

26. "ಸಾವಿರಾರು ಕೆರೆ ತುಂಬಿ."

**VI. ಕೆಳಗಿನ ಪ್ರಶ್ನೆಗಳಿಗೆ ಐದು ಅಥವಾ ಆರು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 4 × 3 = 12**

27. ಮಿನಿ ಪೊಲೀಸ್ ನಗರದಲ್ಲಿ ಎದುರಾದ ಸಮಸ್ಯೆಯಿಂದ ಗೊರೂರರು ಪಾರಾದುದು ಹೇಗೆ ? ವಿವರಿಸಿ.

28. 'ಕೊಡಗಿನ ಗೌರಮ್ಮನವರು ಆ ಕಾಲದ ಮಹಿಳಾ ಸದಭಿರುಚಿಯ ದ್ಯೋತಕವಾಗಿದ್ದರು' ಈ ಹೇಳಿಕೆಯನ್ನು ಸಮರ್ಥಿಸಿ.

29. ನಿಸಾರ್ ಅಹಮದ್‌ರವರು ನಾವೆಲ್ಲರೂ ಭೂಮಿತಾಯಿಯ ಕುಡಿಗಳೆಂದು ಏಕೆ ಪಣ ತೊಡಬೇಕೆಂದು ಹೇಳಿದ್ದಾರೆ ?

30. ಬಸವಣ್ಣನವರ ವಚನಗಳಲ್ಲಿ ಕಂಡುಬರುವ ಮಾನವೀಯ ಮೌಲ್ಯಗಳನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

**VII. ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ ಮತ್ತು ಕೃತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ : 2 × 3 = 6**

31. ವಿಜಯಲಕ್ಷ್ಮಿ ಬಾಳೇಕುಂದ್ರಿ

32. ಸತೀಶ ಕುಲಕರ್ಣಿ

**VIII. ಕೆಳಗೆ ಕೊಟ್ಟಿರುವ ಗಾದೆಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು, ವಿಸ್ತರಿಸಿ ಬರೆಯಿರಿ : 1 × 3 = 3**

33. ಹಾಸಿಗೆ ಇದ್ದಷ್ಟು ಕಾಲು ಚಾಚು.

**ಅಥವಾ**

ಕೈ ಕೆಸರಾದರೆ ಬಾಯಿ ಮೊಸರು.

**IX. ಕೆಳಗಿನ ಒಂದು ಪ್ರಶ್ನೆಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 1 × 4 = 4**

34. ರಾಮಸಿಂಗನು ತನ್ನ ಛಲವನ್ನು ಹೇಗೆ ಸಾಧಿಸಿದನು ? ವಿವರಿಸಿ.

**ಅಥವಾ**

ಸೋಮಣ್ಣನು ಕುಲಕರ್ಣಿಯ ಕೃತ್ಯವನ್ನು ಹೇಗೆ ಖಂಡಿಸಿದನು ? ವಿವರಿಸಿ.

**X. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ : 1 × 4 = 4**

35. ಕಂಚುಗಾರನ ..................................................

..................................................................

..................................................................

.............................................. ಪೂಜೆ ಮಾಡುವುದು.

**ಅಥವಾ**

ನಾನು ಎಂಬುದ ..................................................

..................................................................

..................................................................

.............................................. ಕಾರ್ಯಗಳೆಲ್ಲವೂ.

**XI. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ : 4 × 1 = 4**

ಹಿಂದಿನ ಕಾಲದಿಂದಲೂ ಮನುಷ್ಯ ದೇಹದ ಶ್ರಮವನ್ನು ಕಡಿಮೆ ಮಾಡಿಕೊಳ್ಳಲು ಹೊಸ ಹೊಸ ಯಂತ್ರ ಸಾಧನಗಳನ್ನು ಕಂಡುಹಿಡಿಯುತ್ತಲೇ ಇದ್ದಾನೆ. ಪ್ರಾಚೀನ ಕಾಲದಲ್ಲಿ ನಡಿಗೆಯಿಂದ ಪ್ರಯಾಣ ಮಾಡಬೇಕಿತ್ತು. ನಾಗರೀಕತೆ ಬೆಳೆದಂತೆ ಬಗೆಬಗೆಯ ಬಂಡಿಗಳು ರೂಢಿಗೆ ಬಂದವು. ಬಂಡಿಗಳನ್ನು ಗಾಡಿಗಳನ್ನು ಎಳೆಯಲು ಎತ್ತು, ಕುದುರೆ ಮೊದಲಾದ ಪ್ರಾಣಿಗಳನ್ನು ಬಳಸಲಾಗುತ್ತಿತ್ತು. ಗಾಡಿಯ

ಚಕ್ರಗಳು ಹಳ್ಳಗಳಲ್ಲಿ ಕೆಸರಿನಲ್ಲಿ ಹೂತು ಹೋಗುತ್ತಿದ್ದರಿಂದ ಮರದ ಹಳಿಗಳನ್ನು ದಾರಿಯಲ್ಲಿ ಹಾಸಿ ಗಾಡಿಯ ಚಕ್ರಗಳು ಸುಲಭವಾಗಿ ಉರುಳುವಂತಹ ಏರ್ಪಾಟನ್ನು ಪಾಶ್ಚಾತ್ಯ ದೇಶಗಳಲ್ಲಿ ಮಾಡಲಾಯಿತು. ಕುದುರೆಗಳೇ ಅವುಗಳ ಮೇಲೆ ಗಾಡಿಗಳನ್ನು ಎಳೆಯುತ್ತಿದ್ದವು. ಕಾಲಕ್ರಮೇಣ ಕಬ್ಬಿಣದ ಹಳಿಗಳು ರೂಢಿಗೆ ಬಂದವು. ಈ ಹಳಿಗಳನ್ನೇ 'ರೈಲು' ಎನ್ನುತ್ತಾರೆ. ಇವುಗಳನ್ನು ಹಾಸಿರುವ ದಾರಿಯೇ 'ರೈಲ್ವೇ' ಅಥವಾ ರೈಲುಮಾರ್ಗ. ಉಗಿಯ ಶಕ್ತಿಯಿಂದ ನಡೆಯುವ ಗಾಡಿಗಳು ಬಂದಿದ್ದು 19 ನೇಯ ಶತಮಾನದ ಪ್ರಾರಂಭದಲ್ಲಿ.

36. ಪ್ರಶ್ನೆಗಳು :

ಎ) ಬಗೆಬಗೆಯ ಬಂಡಿಗಳು ಹೇಗೆ ರೂಢಿಗೆ ಬಂದವು ?

ಬಿ) ಪ್ರಾಚೀನ ಕಾಲದಲ್ಲಿ ಪ್ರಯಾಣ ಹೇಗೆ ಮಾಡಬೇಕಿತ್ತು ?

ಸಿ) ಮನುಷ್ಯನು ದೇಹದ ಶ್ರಮವನ್ನು ಹೇಗೆ ಕಡಿಮೆ ಮಾಡಿಕೊಳ್ಳುತ್ತಿದ್ದಾನೆ ?

ಡಿ) ಪ್ರಾಚೀನ ಕಾಲದಲ್ಲಿ ಪ್ರಾಣಿಗಳನ್ನು ಏಕೆ ಬಳಸಲಾಗುತ್ತಿತ್ತು ?

**XII. ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ :** **1 × 4 = 4**

37. ಪ್ರಾಕೃತಿಕ ವಿಕೋಪಕ್ಕೆ ಕಾರಣಗಳು.

**ಅಥವಾ**

ಪ್ರಸ್ತುತ ಶಿಕ್ಷಣದಲ್ಲಿ ಮೊಬೈಲ್ ಬಳಕೆಯ ಮಹತ್ವ.

**XIII. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ :**

**1 × 5 = 5**

38. ನಿಮ್ಮನ್ನು ಮಂಡ್ಯ ಜಿಲ್ಲೆಯ ಸರ್ಕಾರಿ ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ 'ನಾಗರತ್ನ' ಎಂದು ಭಾವಿಸಿಕೊಂಡು, ಎಸ್.ಎಸ್.ಎಲ್.ಸಿ. ಪರೀಕ್ಷಾ ಶುಲ್ಕ ಕಳುಹಿಸಿಕೊಡುವಂತೆ ನಿಮ್ಮ ತಂದೆಯರಿಗೆ ಒಂದು ಪತ್ರವನ್ನು ಬರೆಯಿರಿ.

**ಅಥವಾ**

ನಿಮ್ಮನ್ನು ಬೇಲೂರಿನ ಸರ್ಕಾರಿ ಶಾಲೆಯ ವಿದ್ಯಾರ್ಥಿ **'ಆಕಾಶ್'** ಎಂದು ಭಾವಿಸಿಕೊಂಡು, ನಿಮ್ಮ ಶಾಲೆಗೆ ಶುದ್ಧ ಕುಡಿಯುವ ನೀರಿನ ಸೌಕರ್ಯವನ್ನು ಒದಗಿಸಿಕೊಡುವಂತೆ ಕೋರಿ, ನಿಮ್ಮ ಊರಿನ ಗ್ರಾಮಪಂಚಾಯಿತಿ ಅಧ್ಯಕ್ಷರಿಗೆ ಒಂದು ಮನವಿ ಪತ್ರವನ್ನು ಬರೆಯಿರಿ.